ದಲ್ಲಿ ಕೇಳುವ ಪ್ರಣವನಾದ, ಕಣಗಳ ಕೇಂದ್ರ ಶೋಧಿಸಿದ ಜ್ಞಾನಿ ಕಂಡ ಸೂತ್ರ ಜೀವವೂ ಪರಿಪೂರ್ಣ ಎಂದು ಹೇಳಿದ್ದಾರೆ! ಉಪನಿಷತ್ತಿನ ಕೊನೆಯಲ್ಲಿ ಪ್ರಮಿತಾಕ್ಷರ ವೃತ್ತದಲ್ಲಿ ಇದೇ ಶಾಂತಿಮಂತ್ರ ಬೇರೆ ಯದೇ ಆಯಾಮ ಪಡೆದಿದೆ:

**ಪರಿಪೂರ್ಣ ಸಂಚಿತಕಣಂ ಸತತಂ**
**ಪರಿಯಾಗಿ ಸ್ಫೋಟಿಸುತ ಹೂರಣಮಂ ।**
**ಎರಚುತ್ತ ಭೂಮಿಗೆ, ಪ್ರಪೂರ್ಣತೆಯೊಳ್**
**ಪೊರೆಯುತ್ತ ಮಿಂಚುವುದು ಪೂರ್ಣತೆಯೊಳ್ ॥**

ಭೌತಶಾಸ್ತ್ರ, ಸರಳ ಅದ್ವೈತ ವೇದಾಂತ ಒಂದೇ ಭಾಷೆಯಲ್ಲಿ ಮಾತನಾಡುತ್ತವೆಂದು ಪ್ರಾಜ್ಞರು ಹೇಳುತ್ತಾರೆ. ವಿಚಾರವನ್ನು ಬೆಳೆಸುವ ರೀತಿ ಚೆನ್ನಾಗಿದೆ. ಇಡೀ ಕಾವ್ಯದಲ್ಲಿ ನಿರ್ದಿಷ್ಟ ದೈವದ ಹೆಸರನ್ನು ತರದೆ, 'ಪರಬ್ರಹ್ಮ', 'ದೈವ', 'ಪರಮಾಣು', 'ಪರಮಕಣ', 'ಬೀಜಕೇಂದ್ರ', 'ಪ್ರಚ್ಛನ್ನಶಕ್ತಿ', 'ವಿಕಿರಣ', 'ಪರಮ' ಎಂಬ ಪದಗಳನ್ನು ಮಾತ್ರ ಬಳಸಿದ್ದಾರೆ.

ವಿಚಾರದ ಸ್ವರೂಪ, ಬೆಳೆದು ತಳೆಯುವ ಆಕಾರಗಳಿಗೆ ಅನುಗುಣವಾಗಿ ಪದ್ಯಗಳು ಸಹಜವೆಂಬಂತೆ ವಿವಿಧ ಛಂದೋರೂಪಗಳನ್ನು ತಳೆದಿವೆ. ಪ್ರೊ। ಕೆ. ಅನಂತರಾಮು ಅವರು ಹೇಳಿದಂತೆ 'ಆದರ್ಶದ ಸ್ಥಿತಿಯನ್ನು ವಿವರಿಸುವಾಗ ಸಂಸ್ಕೃತದಲ್ಲಿದ್ದರೂ, ಕನ್ನಡದಲ್ಲಿದ್ದರೂ ಮಂತ್ರವು ಮಂತ್ರವೇ' ಎಂಬ ಮಾತು ಲೇಖಕರಿಗೆ ಹುರುಪನ್ನು, ನಿರಾಳತೆಯನ್ನು ತಂದಿದೆ. ವಿವಿಧ ಸಾಧ್ಯತೆಗಳೊಡನೆ ಸಾಂಸ್ಕೃತಿಕ ಆಚರಣೆಗಳು, ಮಾನವೀಯತೆ, ಭಾರತೀಯತೆಗಳೂ ಇಲ್ಲಿ ಸ್ಥಾನಪಡೆಯುತ್ತವೆ. ವೃತ್ತ, ಷಟ್ಪದಿ, ರಗಳೆಗಳ ಬಳಕೆ ಭಾಷೆಯನ್ನು ಕ್ಲಿಷ್ಟವಾಗಿಸಿಲ್ಲ. ಸಾಮಾನ್ಯರಿಗೆಂದೇ ಬರೆದ ಈ ಕೃತಿಯ ಕಾವ್ಯಭಾಷೆ ಹೊಸಗನ್ನಡಕ್ಕೆ ಸಮೀಪ. ಪಾಂಡಿತ್ಯದ ಪ್ರಯೋಗಶಾಲೆ ಇದಲ್ಲ. 'ದೀನರ ಶ್ವಾಸವೆ ವೇದಾಂತ ಲಯವು। ಶೋಕದ ಜಾಡನು ಗುರುತಿಸಿ ವೇಗದಿ। ಸಾಂತ್ವನ ಪಥದೆಡೆ ಪಾದವ ತಿರುಗಿಸು। ಸಾಕೈ ಸಾಕು ನೀನಮರ ತತ್ತ್ವವಿದ ॥' ಎಂದು ಮಂಗಳ ಪದ್ಯದಲ್ಲಿ ಹೇಳುತ್ತಾರೆ. ಛಂದಸ್ಸಿನಲ್ಲಿ ವಾರ್ಧಕ ಷಟ್ಪದಿ ಅವರ ಓಟಕ್ಕೆ ಉತ್ಕಟತೆ ಒದಗಿಸಿದ್ದರೆ, ವೃತ್ತಗಳು ಅಂತ್ಯಗುರುವುಳ್ಳ ಪದಾನ್ವೇಷಣೆಯ ಸವಾಲನ್ನು ಕನಸಿನಲ್ಲೂ ಒಡ್ಡುತ್ತವೆ! ಇಲ್ಲಿನ ವಿಚಾರಗಳಿಗೆ ಹಳೆಯ ಛಂದೋಸ್ವರೂಪದ ಬಳಕೆ ಕೃತಿಗೆ ಗಾಂಭೀರ್ಯವನ್ನು ತಂದು ಕೊಟ್ಟಿದೆ. ಮುಂದಿನ ಕಾವ್ಯವನ್ನು ದೇಸೀ ಛಂದಸ್ಸುಗಳಲ್ಲಿ ಬರೆಯುವ ಇರಾದೆಯನ್ನು ವ್ಯಕ್ತಪಡಿಸಿದ್ದಾರೆ.


ಕೆಲವು ಮಂತ್ರಗಳ ನಿಗೂಢತೆಯನ್ನು ಸರಳವಾಗಿ ಪರಿಹರಿಸಿದ್ದಾರೆ. ಈಶಾವಾಸ್ಯದ 'ಅಂಧಂತಮಃ ಪ್ರವಿಶಂತಿ...', ಕೇನದ 'ನಾಹಂ ಮನ್ಯೇ ಸುವೇದೇತಿ...', ಮಾಂಡೂಕ್ಯದ 'ಅಮಾತ್ರಶ್ಚತುರ್ಥೋ...' ಇವುಗಳ ಅನುವಾದವನ್ನು ನೋಡಬಹುದು. ಸರಳವಾದ ತೈತ್ತಿರೀಯದ ಭಾವವಿಸ್ತರಣೆ ಸೊಗಸಾಗಿದೆ. ಸ್ವಾಧ್ಯಾಯ ಪ್ರಶಂಸೆಯ ಭಾಗ ಚೆನ್ನಾಗಿದ್ದರೂ, ರಾಥೀತರ ರಾಥೀರಥನಾಗಿದ್ದಾನೆ, ಪದ್ಯದಲ್ಲಿ ರಥರಾಥೀ ಆಗಿದ್ದಾನೆ. ಶಿಷ್ಯಾನುಶಾಸನ ಮೂಲದಲ್ಲೇ ಸರಳವಾಗಿದೆ. ಬ್ರಹ್ಮಾನಂದವಲ್ಲಿಯ ಉಪನಿಷತ್ ಸಾರಸಂಗ್ರಹ ಭಾಗ ಹಾಗೂ ಸೃಷ್ಟಿಯ ಚಿತ್ರ (ಇದು ವೈಜ್ಞಾನಿಕವಾಗಿಯೂ ಸಂಗತ) ಲಲಿತರಗಳೆಯಲ್ಲಿ ಚೆನ್ನಾಗಿ ಬಂದಿದೆ. ಮುಂದಿನ ಪಂಚಕೋಶ ವಿಚಾರದಲ್ಲಿ ಗದ್ಯದ ವಿವರಣೆ ಸ್ವಲ್ಪ ವಿಸ್ತರಿಸಿದ್ದರೆ ಪದ್ಯಭಾಗವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದಿತ್ತೇನೋ. ಒಂದು ಕೋಶದಿಂದ ಮತ್ತೊಂದು ಸೂಕ್ಷ್ಮವಾಗುತ್ತಾ ಹೋದರೂ, ಉನ್ನತಿ ಪಡೆಯುವುದು ಮನಸ್ಸಿಗೆ ತಟ್ಟದು. ಈ ಭಾಗದಲ್ಲಿ ಛಂದೋವೈವಿಧ್ಯವಿಲ್ಲ. ಚಿಕ್ಕ ಉಪನಿಷತ್ತುಗಳಾದ ಈಶಾವಾಸ್ಯದ ಅನುವಾದ ಸಾಕಷ್ಟು ವಿಸ್ತಾರವಾಗಿದೆ; ಮಾಂಡೂಕ್ಯವನ್ನು ಇನ್ನಷ್ಟು ವಿವರಿಸಿದ್ದರೆ ಚೆನ್ನಿತ್ತು ಎಂದು ಅನ್ನಿಸುವಷ್ಟು ಚಿಕ್ಕದಾಗಿದೆ.

ತರ್ಕ, ಛಂದಸ್ಸು ಮತ್ತು ತತ್ತ್ವಗಳ ಬಗ್ಗೆ ಲೇಖಕರು ಹಲವು ಪ್ರಶ್ನೆಗಳನ್ನು ಹಾಕಿಕೊಂಡಿದ್ದಾರೆ. ಮಂತ್ರಗಳ ಶಕ್ತಿ ಎಲ್ಲಿ? ಕಾವ್ಯಭಾಷೆಯಲ್ಲಿಯೋ ಅಥವಾ ಸ್ವರದ ಅಳವಡಿಕೆಯಲ್ಲೋ? ಕನ್ನಡ ಕಾವ್ಯದ ಶಕ್ತಿ ಗಮಕದಲ್ಲಿ ಹಲವು ಬಾರಿ ಅನುಭವಕ್ಕೆ ಬರುತ್ತದೆ. ವಿಶೇಷಣಗಳಿಗೆ ಒತ್ತು ಕೊಡುವ ಗಮಕದ ರೀತಿ ಬಹಳ ಸಲ ತೊಡಕೂ ಆಗುತ್ತದೆ. ಕವನ ನೆನಪಿಗೆ ಸುಲಭ ಎನ್ನುವ ಡಿ.ವಿ.ಜಿ. ಯವರ ಮಾತು ಅನಾವಶ್ಯಕ ವಿಳಂಬಗಳಿಗೆ ಎಡೆಕೊಡದೆ ನಾವೇ ಗಟ್ಟಿಯಾಗಿ ಓದಿಕೊಂಡಾಗ ಸರಿ. ಮನಸ್ಸಿನಲ್ಲೆ ಆಗಾಗ ವಿಚಾರಗಳನ್ನು ನೆನಪಿಗೆ ತಂದುಕೊಂಡು ಮೆಲಕುಹಾಕಲು ಪದ್ಯವೇ ಸೂಕ್ತ. ಕೆ. ಅನಂತರಾಮು ಅವರ ಈ ಕೃತಿ ಈ ದೃಷ್ಟಿಯಿಂದ ಮಾನ್ಯ. ಎಲ್ಲ ಉಪನಿಷತ್ತುಗಳ ಪ್ರಸಿದ್ಧ ಭಾಗಗಳನ್ನು ಒಂದೆಡೆ ಸಂಗ್ರಹಿಸಿ, ಈ ರೀತಿಯಲ್ಲಿ ಛಂದೋಬದ್ಧವಾಗಿ ಭಾವವಿಸ್ತರಣೆ ಮಾಡುವ ಕಾಯಕವನ್ನೂ ಅವರು ಕೈಗೊಳ್ಳಲಿ ಎಂದು ಹಾರೈಸೋಣ.

'ಜೀವದ ಹಾಡು' ಕಾವ್ಯದ ವಾಚನವನ್ನು ಹೊಸಹಳ್ಳಿ ಅನಂತ ನಾರಾಯಣ ಅವರು ಸೂಕ್ತ ರಾಗಸಂಯೋಜನೆಯೊಂದಿಗೆ ಚೆನ್ನಾಗಿ ಮಾಡಿದ್ದಾರೆ. ಲೇಖಕರಂತೆಯೇ ಅವರೂ ಪ್ರಯೋಗ ಕುತೂಹಲಿಗಳು. ಮೂಲದ ಪಠನವನ್ನು ಶಕ್ತಿಯುತವಾಗಿ ಗಮಕ ಶೈಲಿಯಲ್ಲಿ ಶೃಂಗೇರಿ ಶಕ್ತಿಧರ ಶರ್ಮರು ನಡೆಸಿಕೊಟ್ಟಿದ್ದಾರೆ. ಸಾಂಪ್ರದಾಯಿಕ ಪಠನದಿಂದ ಭಿನ್ನವಾಗಿದ್ದರೂ, ಕೇಳುವುದಕ್ಕೆ ಹಿತವಾಗಿದೆ. ಪ್ರತಿ ಮಂತ್ರ, ಕನ್ನಡ ಪದ್ಯಗಳಲ್ಲಿ ಅರ್ಥವಿಸ್ತರಣೆ, ಅನಂತರ ವ್ಯಾಖ್ಯಾನ ಈ ಕ್ರಮದಲ್ಲಿ ಈ ನಡೆ ಇದೆ. ಪುಸ್ತಕದಲ್ಲಿನ ವ್ಯಾಖ್ಯಾನಕ್ಕಿಂತ ಇಲ್ಲಿನದು ವಿಸ್ತಾರ, ಸರಳ ಹಾಗೂ ಈಚಿನ ಜೀವನದ ಸ್ಥಿತಿಯ ವಿವರಗಳಿಂದ ಕೂಡಿ, ಮನಸ್ಸಿಗೆ ಹಿಡಿಯುವಂತಿದೆ. ಗಮಕಕ್ಕೆ ಹೊಂದುವಂತೆ ಪದ್ಯಗಳನ್ನೂ ಅಲ್ಪಸ್ವಲ್ಪ ಮಾರ್ಪಾಡು ಮಾಡಿಕೊಳ್ಳಲಾಗಿದೆ. ಉದಾಹರಣೆಗೆ ಕೇನೋಪನಿಷತ್ತಿನ ಶಾಂತಿ ಮಂತ್ರದ ಅನುವಾದ ಪದ್ಯದ 'ಸರ್ವಾಂಗಗಳು... ಲೋಕಸೇವೆಯಲಿ ಸವೆಯುತಿರಲಿ' ಗಮಕದಲ್ಲಿ ಹಾಡುವಾಗ 'ಸರ್ವಾಂಗಗಳು... ಲೋಕಕಾರ್ಯದಲಿ ತೊಡಗಿರಲಿ' ಎಂದಾಗಿದೆ. ಪುಸ್ತಕ ಓದಿಕೊಳ್ಳುವುದು ಒಂದು ತರಹ ಸೊಗಸು, ಡಿವಿಡಿಯಲ್ಲಿ ಕೇಳುವುದು ಇನ್ನೊಂದು ತರಹ ಸೊಗಸು. ಒಟ್ಟಿನಲ್ಲಿ ಮೂಲ ಹಾಗೂ ಭಾಷ್ಯ ಅನುಸಾರಿಯಾದ ಪದ್ಯಗಳು, ವ್ಯಾಖ್ಯಾನ ಕೇಳುಗರಿಗೆ ಒಪ್ಪುವಂತಿದೆ. ಉಪನಿಷತ್ ವಿಚಾರದ ಪ್ರವೇಶಕ್ಕೆ ಸಹಕಾರಿ.

*– ಡಾ॥ ಹೆಚ್. ಪಾಂಡುರಂಗ ವಿಠಲ*





# ಪಂಚಕೇದಾರ ಯಾತ್ರೆ

ಸ್ವಾಮಿ ಜ್ಞಾನಯೋಗಾನಂದ

## ಭಾಗ ೪ : ರುದ್ರನಾಥ

### ೧. ಹರಿಯಾಲಿ ಹೋಟೆಲ್

**ಸ**ಗರ್‌ನಲ್ಲಿ ಬಂದಿಳಿದರೆ, ಒಂದು ಅಂಗಡಿಯಾಗಲಿ, ಹೋಟೆಲಾಗಲಿ ಕಾಣಸಿಗಲಿಲ್ಲ. ತುಸು ಮುಂದಕ್ಕೆ ಕೆಲವು ಅಂಗಡಿಗಳು ಕಾಣಿಸಿದವು. ರಸ್ತೆಯಲ್ಲೇ ನಡೆಯುತ್ತಾ ಅಲ್ಲಿದ್ದ ಅಂಗಡಿಗಳಲ್ಲೆಲ್ಲ ತಂಗಲು ಸ್ಥಳ ಕೇಳುತ್ತಾ ಒಂದು ಹೋಟೇಲಿಗೆ ಬಂದೆವು. 'ಹರಿಯಾಲಿ ಹೋಟೆಲ್' ಎಂದು ಬರೆದಿದ್ದ ಆ ಅಂಗಡಿ- ಹೋಟೆಲ್‌ನಲ್ಲಿ ಒಬ್ಬಾತ, ''ಬಾಬಾಜೀ, ಎತ್ತ ಹೊರಟಿದ್ದೀರಿ?'' ಎಂದು ಕೇಳಿದ. ''ರುದ್ರನಾಥಕ್ಕೆ. ಒಂದು ದಿನ ಉಳಕೊಳ್ಳಲು ಎಲ್ಲಿ ರೂಂ ಸಿಗುತ್ತದೆ?'' ಎಂದು ಕೇಳಿದೆವು. ಅವನು ತುಸು ದೂರದಲ್ಲಿದ್ದ ಒಂದು ಕಟ್ಟಡವನ್ನು ತೋರಿಸಿದ. ಅಲ್ಲಿಗೆ ಹೋಗಿ, ''ರೂಂ ಸಿಗುತ್ತಾ?'' ಎಂದಿದ್ದಕ್ಕೆ ಒಬ್ಬ ಮಧ್ಯವಯಸ್ಕ, ''ಬನ್ನಿ'' ಎಂದ. ಹಲವು ಮಂದಿ ತಂಗಬಹುದಾದ ಒಂದು ಡಾರ್ಮಿಟರಿಯಲ್ಲೇ ನಮಗೆ ಕೋಣೆ ನೀಡಿದ.

ಹೋಟೆಲ್ ಮಾಲೀಕನೊಂದಿಗೆ ಮಾತನಾಡುತ್ತ, ರುದ್ರನಾಥಕ್ಕೆ ಹೋಗಲು ಒಬ್ಬ ಗೈಡ್ ಸಿಗುತ್ತಾನೆಯೇ ಎಂದು ಕೇಳಿದೆವು. ಹತ್ತಿರದ ಹಳ್ಳಿಯಲ್ಲಿ ಒಬ್ಬ ಗೈಡ್ ಇದ್ದಾನೆಂದೂ, ಅವನು ಬರಬಹುದೆಂದೂ ಆತ ಹೇಳಿದ. ತುಂಬಾ ಆಯಾಸವಾಗಿತ್ತು; ಕೋಣೆಗೆ ಬಂದು ಹೊದ್ದು ಮಲಗುವಷ್ಟರಲ್ಲೇ ಚೆನ್ನಾಗಿ ನಿದ್ರೆ ಹತ್ತಿತು. ರಾತ್ರಿ ಎಂಟು ಗಂಟೆ ಹೊತ್ತಿಗೆ ಹೋಟೆಲಿಗೆ ಹೋದೆವು. ಏನೂ ತಿನ್ನದಿದ್ದರೆ ಮರುದಿನ ಬೆಳಗ್ಗೆ ಎದ್ದು ಮತ್ತೆ ರುದ್ರನಾಥಕ್ಕೆ ನಡೆಯಬೇಕಲ್ಲ, ಹೋಟೆಲಲ್ಲಿ ನೂಡಲ್ಸ್ ಮಾಡಿ ಕೊಟ್ಟ, ಅದನ್ನು ತಿಂದು, ಗೈಡ್ ಬಗ್ಗೆ ಮತ್ತೆ ವಿಚಾರಿಸಿದೆವು. ಬೆಳಿಗ್ಗೆ ಆರಕ್ಕೆ ಗೈಡ್ ಬರಲು ಒಪ್ಪಿದ್ದಾನೆಂದು ಮಾಲೀಕ ತಿಳಿಸಿದ. ರಾತ್ರಿ ಕೋಣೆಗೆ ಬಂದು ಮತ್ತೆ ಮಲಗಿದೆವು; ಬೆಳಗಾದುದೇ ಗೊತ್ತಾಗಲಿಲ್ಲ.

### ೨. ಕಡಿದಾದ ಹಾದಿ – ಯಾತ್ರಿಕರಿಗೆ ಸವಾಲು

ರುದ್ರನಾಥಕ್ಕೆ ಎರಡು ಮಾರ್ಗವಾಗಿ ಹೋಗಬಹುದು. ಎರಡೂ ಕಡೆ ನಡೆಯಬೇಕು, ರಸ್ತೆಗಳಿಲ್ಲ. ಒಂದು ದಾರಿ, ಮಂಡಲ್ (ಚೋಪ್ತಾದಿಂದ ಗೋಪೇಶ್ವರ ದಾರಿಯಲ್ಲಿ ಹೊರಟರೆ ಮೊದಲು ಈ ಸ್ಥಳ ಸಿಗುತ್ತದೆ) ಎನ್ನುವ ಪ್ರದೇಶದಿಂದ ಹೊರಟು ಅನಸೂಯಾದೇವಿ ಮಂದಿರದ ಮೂಲಕ ರುದ್ರನಾಥಕ್ಕೆ ಹೋಗುತ್ತದೆ; ಬೆಳಗ್ಗೆ ಹೊರಟರೆ ಸಾಯಂಕಾಲ ರುದ್ರನಾಥ ತಲುಪಬಹುದು. ಆದರೆ ಈ ದಾರಿಯಲ್ಲಿ ಶ್ರಮ ಹೆಚ್ಚು , ಹಗಲೆಲ್ಲ ನಡೆಯಬೇಕು. ಇನ್ನೊಂದು ದಾರಿ, ಸಗರ್ ಮೂಲಕ. ಮಂಡಲ್‌ನಿಂದ ಗೋಪೇಶ್ವರದತ್ತ ಇನ್ನೂ ನಾಲ್ಕು ಕಿ.ಮೀ. ಮುಂದಕ್ಕೆ ಸಗರ್ ಎನ್ನುವ ಸ್ಥಳ ಸಿಗುತ್ತದೆ. ಅಲ್ಲಿಂದ ಕಾಲುನಡಿಗೆಯಲ್ಲಿ ಹೊರಟು 'ಪನ್ನಾರ್ ಗುಫಾ' ಎನ್ನುವ ಸ್ಥಳದಲ್ಲಿ ತಂಗಬೇಕು; ಮರುದಿನ ಬೆಳಗ್ಗೆ ಅಲ್ಲಿಂದ ಮತ್ತೆ ಯಾತ್ರೆ ಮುಂದುವರೆಸಿ, ರುದ್ರನಾಥ ತಲುಪಬೇಕು. ಪನ್ನಾರ್ ಗುಫಾ ತಲುಪುವ ದಾರಿ ಮಾತ್ರ ಅತ್ಯಂತ ಕಡಿದು; ಬಹಳ ಮಂದಿಗೆ ಇದನ್ನೇರಿ ಬರುವುದು ತುಂಬಾ ಕಠಿಣ. ನಾವು ಈ ಎರಡನೇ ದಾರಿಯನ್ನೇ ಆರಿಸಿಕೊಂಡಿದ್ದೆವು.

ಬೆಳಿಗ್ಗೆ ಐದೂಮುಕ್ಕಾಲಕ್ಕೆ ನಾವು ತಯಾರಾಗಿ, ನಮ್ಮ ಹಗುರವಾದ ಹೆಗಲ ಚೀಲ, ಲಾಠಿಗಳೊಂದಿಗೆ ಹೋಟೆಲಿಗೆ ಬಂದು

ತಲುಪಿದೆವು. ಆಗಲೇ ಅಲ್ಲಿ ಗೈಡ್ ಬಂದು ನಮಗಾಗಿ ಕಾದಿರುತ್ತಾನೆ ಎಂದು ನಿರೀಕ್ಷಿಸಿದ್ದೆವು. ಆದರೆ ಯಾವ ಗೈಡೂ ಕಾಣಲಿಲ್ಲ. ಹೋಟೆಲಿನ ಮಾಲೀಕನೂ ಅಲ್ಲಿರಲಿಲ್ಲ. ಹೋಟೆಲ್ ನೌಕರನನ್ನು ವಿಚಾರಿಸಿದರೆ, ''ಗೈಡ್ ಬಂದಾನು. ನಮ್ಮ ಮಾಲೀಕರು ಅವನಿಗೆ ತಿಳಿಸಿದ್ದಾರೆ'' ಎಂದ. ''ಈಗಲೇ ಗಂಟೆ ಆರಾಯಿತು. ಇನ್ಯಾವಾಗ ಬರುತ್ತಾನೆ? ನೀನೀಗಲೇ ಹೋಗಿ ನಿಮ್ಮ ಮಾಲೀಕರನ್ನು ಕರೆ'' ಎಂದೆವು. ಅವನು ಓಡಿಹೋಗಿ ಅವನ ಮಾಲೀಕನನ್ನು ಕರೆದುಕೊಂಡು ಬಂದ. ''ಬರುತ್ತಾನೆ ಮಹಾರಾಜ್. ನಾನು ನಿನ್ನೆ ತಿಳಿಸಿದ್ದೇನೆ'' ಎಂದ ಹೋಟೆಲ್ ಮಾಲೀಕ. ''ಗಂಟೆ ಆರಾಯಿತು. ಐದೂವರೆಗೇ ನಾವು ಹೊರಡಬೇಕಿತ್ತು. ಇನ್ನೂ ಬರಲಿಲ್ಲ'' ಎಂದು ನಾವು ಗಲಾಟೆ ಮಾಡಿದೆವು. ಅಷ್ಟರಲ್ಲಿ ಅವನು ಯಾರಿಗೋ ಫೋನ್ ಮಾಡಿ ವಿಚಾರಿಸಿದ. ಅನಂತರ, ''ಬರುತ್ತಾನೆ.. ಹೊರಟಿದ್ದಾನಂತೆ. ಹತ್ತಿರದ ಹಳ್ಳಿಯಿಂದ ಬರಬೇಕು.. ಬರುತ್ತಾನೆ'' ಎಂದು ನಮಗೆ ಸಮಾಧಾನ ಮಾಡಿದ. ಸುಮಾರು ಇಪ್ಪತ್ತು ನಿಮಿಷಗಳ ನಂತರ ಒಬ್ಬಾತ ರಸ್ತೆಯಲ್ಲಿ ನಡೆದು ಬರುತ್ತಿದ್ದುದನ್ನು ಕಂಡ ಹೋಟೆಲ್ ನೌಕರ, ''ನೋಡಿ, ನಿಮ್ಮ ಗೈಡ್ ಬಂದೇ ಬಿಟ್ಟ'' ಎಂದ.

''..ನಮಸ್ತೇ ಮಹಾರಾಜ್‌ಜೀ. ನನ್ನ ಹೆಸರು ವಿಕ್ರಂ ಸಿಂಹ ಬಿಷ್ಟ. ನಾನು ನಿಮ್ಮೊಂದಿಗೆ ರುದ್ರನಾಥಕ್ಕೆ ಬರುತ್ತೇನೆ...'' ಎಂದು ಅವನು ಹೇಳುವಷ್ಟರಲ್ಲೇ ನಾವು ಅವನ ಮೇಲೆ ಹರಿಹಾಯ್ದೆವು: ''ಏನಯ್ಯಾ ಇಷ್ಟು ಲೇಟು? ಐದೂವರೆಗೆ ಇಲ್ಲಿಂದ ಹೊರಡಬೇಕಾಗಿತ್ತು; ಆರುಗಂಟೆಯಾದರೂ ನಿನ್ನ ಪತ್ತೆಯಿಲ್ಲ? ಇನ್ಯಾವಾಗ ಹೊರಡುವುದು, ಬಿಸಿಲೇರುತ್ತದೆ ಬೇರೆ?'' ಎಂದೆಲ್ಲ ಬಡಬಡಿಸಿದೆವು. ''ಕ್ಷಮಿಸಿ ಮಹಾರಾಜ್, ನನಗೆ ನಿನ್ನೆ ರಾತ್ರಿ ಇವರು ತಿಳಿಸುವಾಗಲೇ ತುಂಬ ತಡವಾಗಿಬಿಟ್ಟಿತು. ನಾವು ಗ್ರಾಮದಲ್ಲಿ ವಾಸಿಸುತ್ತೇವೆ. ಬೆಳಿಗ್ಗೆ ತಡವಾಗಿಬಿಟ್ಟಿತು...'' ಎಂದ. ಹೆಚ್ಚು ಬೈದರೆ, ಮುಂದಿನ ಯಾತ್ರೆಗೆ ಅವನನ್ನೇ ಆಶ್ರಯಿಸಬೇಕಲ್ಲ!

ಆರಂಭದಲ್ಲಿ ನಾವು ಸಾಗಿದ ಹಾದಿ ಹೆಚ್ಚೇನು ಕಡಿದಾದ ದಾರಿಯಲ್ಲ ; ಆದರೆ ದಟ್ಟವಾದ ಅರಣ್ಯದ, ಸಾಕಷ್ಟು ವೈವಿಧ್ಯಮಯ ಮರಗಳಿಂದ ಕೂಡಿದ ಪ್ರದೇಶವಾಗಿತ್ತು. ಬೆಟ್ಟದ ಸೆರಗಿನಲ್ಲಿ ಕಾಡು ಅಷ್ಟೊಂದು ದಟ್ಟವಾಗಿರುವುದಿಲ್ಲ ; ಕೆಲವೇ ಬಗೆಯ ಮರಗಳಿರುತ್ತವೆ. ಆದರೆ ಕಣಿವೆಗಳಲ್ಲಿ , ಹೆಚ್ಚು ಎತ್ತರವಿಲ್ಲದ ಪ್ರದೇಶಗಳಲ್ಲಿ ಕಾಡಿನ ವೈವಿಧ್ಯ, ದಟ್ಟಣೆ ಅಧಿಕ. ಅದನ್ನು ನೋಡುವುದಕ್ಕೆ ತುಂಬ ಆನಂದವಾಗುತ್ತದೆ. ಏಕೆಂದರೆ ಅಲ್ಲಿ ಏಕತಾನತೆಯಿಲ್ಲ ; ನೋಡಿದ್ದನ್ನೇ ನೋಡುತ್ತೇವೆ ಅನ್ನಿಸುವುದಿಲ್ಲ.

ಮಧ್ಯೆ ತುಸು ಎತ್ತರವಾದ ಒಂದು ಪ್ರದೇಶ ಬಂದಾಗ, ''ಪರವಾಗಿಲ್ಲ , ಇಂಥ ಬೆಟ್ಟವಾದರೆ ಸುಲಭವಾಗಿ ನಡೆಯಬಹುದು. ಇದು ಅಷ್ಟೇನೂ ಕಡಿದಲ್ಲ'' ಎಂದೆ, ನಮ್ಮ ಮಾರ್ಗದರ್ಶಕನ ಬಳಿ. ಆಗ ಅವನು, ''ಸ್ವಾಮಿ, ಸ್ವಲ್ಪ ದೂರ ಇದು ಹೀಗೆ ಸಾಗುತ್ತದೆ. ಅನಂತರ ನೋಡಿ, ಏಕ್‌ದಂ ಕಡಿದಾದ ದಾರಿ'' ಎಂದ. ನಡುನಡುವೆ ಇಳಿಜಾರು, ಸಣ್ಣ ತೊರೆ, ತರಗೆಲೆಗಳಿಂದ, ಪೊದರು ಮುಳ್ಳುಕಂಟಿಗಳಿಂದ ತುಂಬಿದ ಕಾಲುದಾರಿ. ಅಲ್ಲಲ್ಲಿ ಕಂಡುಬರುವ ಹೂಗಳ, ಹಣ್ಣುಗಳ ಕುರಿತಾಗಿ ಅವುಗಳ ಹೆಸರೇನು, ಅವನ್ನು ತಿನ್ನಬಹುದೇ ಎಂದೆಲ್ಲ ವಿವರಣೆ ಕೊಟ್ಟ ವಿಕ್ರಂ ಸಿಂಹ.

ನಾವು ನಮ್ಮ ನಡಿಗೆ ಆರಂಭಿಸಿ ಸುಮಾರು ಒಂದು ಗಂಟೆಯಾಗಿದ್ದಿರಬೇಕು; ಕಾಡಿನ ನಡುವೆ ಒಂದು ಬುಗ್ಯಾಲ್ ಕಾಣಿಸಿತು. ಅಲ್ಲಿ ಒಂದು ಸಣ್ಣ ಗುಡಿಸಲಿನಂಥ ಹೋಟೆಲ್ ಇತ್ತು. 'ಊಟದ ಹೋಟೆಲ್' ಎಂಬರ್ಥದ ಹಿಂದೀ ಬೋರ್ಡ್ ಹಾಕಿದ್ದರಿಂದ ಮಾತ್ರ ಅದನ್ನು ಹೋಟೆಲ್ ಎನ್ನಬೇಕಾಗಿತ್ತು. ಅಲ್ಲಿ ವಿಶೇಷವಾಗಿ ತಿನ್ನುವಂಥದ್ದೇನೂ ಇರಲಿಲ್ಲ ; ಬೇಕಿದ್ದರೆ ನೂಡಲ್ಸ್ ಮಾಡಿಕೊಡುತ್ತೇನೆ ಎಂದ ಹೋಟೆಲಿನವನು. ನಾವು ಅಲ್ಲಿ ಬಿಸ್ಕತ್ತು ತಿಂದು ಚಹಾ ಕುಡಿದೆವು. ವಿಕ್ರಂ ಸಿಂಹನಿಗೆ ಆ ಹೋಟೆಲಿನವನು ಚಿರಪರಿಚಿತ. ಹಾಗಾಗಿ ಪುಕ್ಕಟೆ ಚಹಾ ಕೊಟ್ಟ. ನಮ್ಮ ನಡಿಗೆ ಮುಂದುವರೆಯಿತು. ಗೈಡ್ ವಟವಟ ಮಾತನಾಡುತ್ತಲೇ ಇದ್ದ. ನಮಗರಿವಿಲ್ಲದಂತೆ ನಮ್ಮ ದಾರಿ ಕಡಿದಾಗುತ್ತ ಬಂದುದು, ನಮಗೆ ಆಯಾಸವಾದಾಗ ತಿಳಿದು ಬಂತು. ಕಾಡಿನ ನಡುವೆ ದಾರಿಯುದ್ದಕ್ಕೂ ಕಲ್ಲು ಚಪ್ಪಡಿಗಳನ್ನು ಇರಿಸಿ, ದಾರಿ ಕಾಣಿಸುವಂತೆ ಮಾಡಿದ್ದಾರೆ. ದನಗಳ ದಾರಿಗಿಂತ ತುಸು ಉತ್ತಮವಾದ ಕಾಲು ದಾರಿ ಅಷ್ಟೆ. ನಡುನಡುವೆ ತರಗೆಲೆಗಳು ತುಂಬಿ ದಾರಿ ಕಾಣಿಸದೆ ಹೋಗಿದೆ, ಓಕ್ ಮರದ ಎಲೆಗಳ ಮೇಲೆ ಕಾಲಿಟ್ಟರೆ ಜಾರಿಬೀಳುವ ಸಂಭವವೂ ಇತ್ತು. ''ಈ ಕಾಡಿನಲ್ಲಿ ಭೀಕರ ಪ್ರಾಣಿಗಳಿಲ್ಲವೆ?'' ಗೈಡ್‌ನನ್ನು ಕೇಳಿದೆ. ''ಇರಬಹುದು. ಚಿರತೆ, ಕರಡಿ, ಜಿಂಕೆಗಳೆಲ್ಲ ಇವೆ. ಹುಲಿ ಇದ್ದರೂ ಇರಬಹುದು'' ಎಂದ ವಿಕ್ರಂ ಸಿಂಹ.

ಮತ್ತೆ ನಮ್ಮ ನಡಿಗೆ ಮುಂದುವರಿಯಿತು. ಮುಂದಿನ ಹಾದಿ ಎಷ್ಟು ಕಡಿದಾಗಿತ್ತೆಂದರೆ, ಮೇಲಕ್ಕೆ ಏರುತ್ತ ಹೋಗುವ ಹಾದಿ ಆಗುಂಬೆ ರಸ್ತೆಯಲ್ಲಿನ 'ಹೇರ್‌ಪಿನ್ ತಿರುವು' ಅನ್ನು ನೆನಪಿಸುವಂತಿತ್ತು. ಒಂದೊಂದು ಹೆಜ್ಜೆ ಏರುವಾಗಲೂ ಆಯಾಸ, ಕಾಲು ನೋವು ಅನುಭವವಾಗುತ್ತಿತ್ತು. ನಡುನಡುವೆ ನಿಂತು ಆಯಾಸ ಪರಿಹರಿಸಿಕೊಂಡು ಮುಂದುವರಿದೆವು. ಕಾಡಿನ ನೆರಳಿನಲ್ಲೂ ಬೆವರು ಸುರಿಯುತ್ತಿತ್ತು. ನೋಡನೋಡುತ್ತಿದ್ದಂತೆ ಕಾಡು, ಮರ, ತೋಟಗಳೆಲ್ಲ ವಿರಳವಾಗಿ, ನಮ್ಮ ಮುಂದಿನ ಹಾದಿಯೆಲ್ಲ ಒಂದು ಬೋಳುಗುಡ್ಡವಾಗಿದ್ದುದು ಕಾಣಿಸಿತು. ಸಾಕಷ್ಟು ದೂರದಲ್ಲಿ ನಮ್ಮ ಬೆಟ್ಟದ ತುದಿ ಕಾಣಿಸುತ್ತಿತ್ತು. 'ನೋಡಿ, ಅದೇ ಪನ್ನಾರ್‌ಗುಫಾ!' ಎಂದ ವಿಕ್ರಮಸಿಂಹ. ಈಗಾಗಲೇ ಗಂಟೆ ಹನ್ನೊಂದಾಗಿತ್ತು. ಬೆಟ್ಟದ ತುದಿಯೇನೋ ಹತ್ತಿರದಲ್ಲಿರುವಂತೆ ಕಂಡು ಬಂದರೂ, ಅಲ್ಲಿಗೆ ತಲುಪಲು ಸುಮಾರು ಎರಡು ಗಂಟೆಯಾದರೂ ಬೇಕಾದೀತು ಎಂದನಾತ. ಮೇಲಕ್ಕೇರುತ್ತ ಹೋದಂತೆಲ್ಲ ಅನ್ನಿಸಿತು, ಒಂದು ಗಂಟೆಯ ದಾರಿ ಮಾತ್ರ ಏರು, ತಗ್ಗುಗಳಿದ್ದವು – ಕಾಡಿನ ನಡುವೆ. ಅಲ್ಲಿಂದ ಮುಂದಕ್ಕೆ ಒಂದೇ ಸಮನೆ ಕಡಿದಾದ ದಾರಿ. ಸುಮಾರು ಐದು ಗಂಟೆಗಳ ಕಾಲ ಕಡಿದಾದ ಆ ಪರ್ವತವನ್ನು ನಿರಂತರ ಏರಿ

ಬಂದಿದ್ದೆವು. ನಾವು ನಡೆದ ರೀತಿಯನ್ನು ನೋಡಿ ನಮ್ಮ ಮಾರ್ಗ ದರ್ಶಕ, ''ಪರವಾಗಿಲ್ಲ, ಮಹಾರಾಜ್; ನೀವು ಚೆನ್ನಾಗಿ ನಡೆಯುತ್ತೀರಿ. ನೀವು ಬೇಗ ತಲುಪಬಹುದು'' ಎಂದು ಸರ್ಟಿಫಿಕೇಟ್ ಕೊಟ್ಟ.

ಪನ್ನಾರ್‌ಗುಫಾ ನಮ್ಮ ಕಣ್ಣಿಗೇನೋ ಕಾಣಿಸುತ್ತಿತ್ತು. ಆದರೆ ಮೇಲಕ್ಕೆ ಏರಿ ಹೋದಷ್ಟೂ ಅದು ಇನ್ನೂ ದೂರ ಅನ್ನಿಸುತ್ತಿತ್ತು. ಈಗ ದಾರಿ ಅಷ್ಟೇನೂ ಕಡಿದಾಗಿರಲಿಲ್ಲ; ಆದರೆ ಒಂದೊಂದು ಹೆಜ್ಜೆ ಏರುವುದೂ ಕಠಿಣವೆನಿಸುತ್ತಿತ್ತು. ಮರಗಳಿಲ್ಲದ ಬುಗ್ಯಾಲ್ ಅದು; ಎಲ್ಲೆಡೆ ಒಂದು ರೀತಿಯ ಹುಲ್ಲು ಹರಡಿತ್ತು. ಬಿಸಿಲಿಗೆ ಅತ್ಯಂತ ಆಯಾಸವಾಗುತ್ತಿತ್ತು. ನೀರು ಕುಡಿದು, ದಣಿವಾರಿಸಿಕೊಂಡು, ನಡುನಡುವೆ ನಿಂತು ಹೇಗೋ ನಡಿಗೆ ಮುಂದುವರಿಸಿದೆವು. ಕಾಲು ಮುಂದಕ್ಕೆ ಸಾಗುತ್ತಿರಲಿಲ್ಲ, ಸೊಂಟ ಬಿದ್ದೇ ಹೋಗುವಂತಿತ್ತು. ಹೇಗಾದರೂ ಒಂದು ಸಲ ಬೆಟ್ಟದ ತುದಿ ತಲುಪಿದರೆ ಸಾಕೆಂದು ನಿಧಾನವಾಗಿಯಾದರೂ ಸರಿ, ಮುಂದಕ್ಕೆ ನಡೆದೇ ನಡೆದೆವು. ''ನಿಂತು ನಿಂತು ದಣಿವಾರಿಸಿಕೊಳ್ಳಿ ಮಹಾರಾಜ್, ಕುಳಿತು ಬಿಡಬೇಡಿ – ಕುಳಿತರೆ ಮತ್ತೆ ಏಳುವುದಕ್ಕೇ ಆಗದು. ಒಂದೇ ವೇಗದಲ್ಲಿ ಮೇಲಕ್ಕೆ ಹೋಗಿಬಿಡಬೇಕು. ಅನಂತರ ಎಷ್ಟಾದರೂ ವಿಶ್ರಾಂತಿ ಪಡೆದುಕೊಳ್ಳಿ'' ಎಂದ ನಮ್ಮ ಮಾರ್ಗದರ್ಶಕ. ನಡುನಡುವೆ ಗಾಳಿ ಬೀಸಿ ಬರುತ್ತಿತ್ತು; ಆಗ ಮೈಗೆ ತಂಪೆನಿಸಿ ಹಿತವೆನಿಸುತ್ತಿತ್ತು. ಅಂತೂ ಬರಬರುತ್ತ ಪನ್ನಾರ್‌ಗುಫಾ ಎಂಬ ಬೆಟ್ಟದತುದಿ ಹತ್ತಿರವಾಯಿತು. ಕೊನೆಗೂ ಗುಡ್ಡದ ತುದಿ ತಲುಪಿದೆವು; 'ಅಬ್ಬ' ಎಂದು ನಿಟ್ಟುಸಿರಿಡುತ್ತ, ಆಯಾಸದಿಂದ ಕಾಲೆಳೆಯುತ್ತ ಸುತ್ತಮುತ್ತ ಕಣ್ಣು ಹಾಯಿಸಿದೆವು. 'ಇದೇ ಪನ್ನಾರ್‌ಗುಫಾ' ಎಂದ ಬಿಕ್ರಂ ಸಿಂಹ ಬಿಷ್ಟ.

## ೩. ಪನ್ನಾರ್‌ಗುಫಾ

ಸುತ್ತ ನೋಡಿದರೆ ಎಲ್ಲೆಡೆ ಅದ್ಭುತರಮ್ಯ ದೃಶ್ಯಾವಳಿಗಳು. ಪೂರ್ವ, ಉತ್ತರ ದಿಕ್ಕಿನಲ್ಲಿ ನಾನಾ ಗಿರಿಶಿಖರಗಳು; ನಡುನಡುವೆ ಹಿಮಾಚ್ಛಾದಿತ ಪರ್ವತಮಾಲೆ. ಆದರೆ ಅವು ತುಂಬ ದೂರದಲ್ಲಿದ್ದವು. ನಾವು ನಿಂತ ಪ್ರದೇಶವೂ ಒಂದು ಪರ್ವತದ ತುದಿಭಾಗ; ಬರೀ ಹುಲ್ಲಿನ ಹಾಸು; ಎಲ್ಲೆಲ್ಲೂ ಹಸಿರು, ಖಾಲಿ ಪ್ರದೇಶ; ಮರಗಳೇ ಇಲ್ಲ. ಆದ್ದರಿಂದಲೇ ಪನ್ನಾರ್ ಬುಗ್ಯಾಲ್ ಎಂದೂ ಕರೆಯುವುದುಂಟು. ತುಸು ತಗ್ಗು ಪ್ರದೇಶಕ್ಕೆ ಹೋದಂತೆ ದಟ್ಟ ಕಾಡುಗಳಿವೆ. ಇತ್ತ ಪಶ್ಚಿಮ, ದಕ್ಷಿಣ ಭಾಗದತ್ತ ಹೊರಳಿದರೆ ಬಹು ದೂರದವರೆಗೆ ಕಾಣಿಸುವ ಇಳಿಜಾರು ಕಣಿವೆ. ನಾವು ಬಂದ ದಾರಿಯೂ ಈ ಕಣಿವೆಯ ಕಾಡುಗಳ ನಡುವಿನಿಂದಲೇ. ಸುತ್ತ ತಿರುಗಿದರೆ ನಾಲ್ಕೂ ದಿಕ್ಕುಗಳ ಪ್ರದೇಶಗಳೆಲ್ಲ ಕಾಣಿಸುತ್ತವೆ. ಎಷ್ಟೊಂದು ಮನಮೋಹಕ ಸ್ಥಳ ಅದೆಂದರೆ, ಸುಮ್ಮನೆ ನೋಡುತ್ತಲೇ ಇರಬೇಕೆನಿಸುತ್ತಿತ್ತು. ಗಾಳಿ ರಭಸವಾಗಿ ಬೀಸುತ್ತಿತ್ತು. ಅದರ ಭರಕ್ಕೆ ಬಿದ್ದು ಹೋಗುತ್ತೇವೋ ಅನಿಸುತ್ತಿತ್ತು. ಜೊತೆಗೆ ಮೈಕೊರೆಯುವ ಚಳಿ. ಬಿಸಿಲು ಜೋರಾಗಿದ್ದರೂ, ನಡುವೆ ಮೋಡ, ಮಂಜು ಆ ತುದಿ ಪ್ರದೇಶವನ್ನು ಆವರಿಸಿಬಿಡುತ್ತಿತ್ತು. ಬಳಲಿ ಬೆಂಡಾಗಿದ್ದ ನಮಗೆ ಒಂದೆಡೆ ಕುಳಿತರೆ ಸಾಕಾಗಿತ್ತು. ನಮ್ಮ ಚೀಲಗಳನ್ನು ಅಲ್ಲೇ ಒಂದೆಡೆ ಇಟ್ಟು, ''ಕುಳಿತುಕೊಳ್ಳಿ. ಇಂದು ನಾವು ಇಲ್ಲೇ ತಂಗಬೇಕು'' ಎಂದ ನಮ್ಮ ಗೈಡ್. ನಾವು ಅಲ್ಲೇ ಕುಳಿತುಕೊಂಡೆವು.

''ಆದರೆ ಇಲ್ಲಿ ಇಳಿದುಕೊಳ್ಳುವುದಕ್ಕೆ ಸ್ಥಳವೆಲ್ಲಿದೆ?'' ಎಂದು ಅವನನ್ನು ಕೇಳಿದೆ. ''ಅಲ್ಲಿದೆ ನೋಡಿ – ಅದೇ ಕಟ್ಟಡ'' ಎಂದ ವಿಕ್ರಂ ಸಿಂಹ. ಅಲ್ಲಿ ಒಂದು ಹೊಸ ಕಟ್ಟಡವಿತ್ತು; ಚಿಕ್ಕದು, ಒಂದು ರೀತಿಯ ಮುರುಕು ಮನೆಯಂತಿತ್ತು. ಅದರ ಪಕ್ಕದಲ್ಲೇ ಒಂದು ಗುಡಿಸಲು; ಅದನ್ನು ನೋಡಿದರೇ ಗೊತ್ತಾಗುತ್ತಿತ್ತು, ಅದು ಒಂದು ಹೋಟೆಲ್ ಅಂತ. ಗುಡಿಸಲಿನಿಂದ ಹೊಗೆಯೇಳುತ್ತಿತ್ತು, ಹಾಗೂ ಒಂದಿಬ್ಬರು ಪಾತ್ರೆ ತೊಳೆಯುವ, ಅಡಿಗೆ ಮಾಡುವ ಕಾಯಕದಲ್ಲಿ ನಿರತರಾಗಿದ್ದರು. ನಾನು, ಕರುಣಾಕರಾನಂದಜಿ ಕನ್ನಡದಲ್ಲಿ ಮಾತನಾಡಿಕೊಂಡೆವು: ''ಈ ಗೈಡುಗಳು ಹೇಗಾದರೂ ಮಾಡಿ ಒಂದು ದಿನ ಹೆಚ್ಚಿಸಬೇಕು ಅಂತಿದ್ದಾರೆ. ಒಂದು ದಿನ ಹೆಚ್ಚಾದರೆ ಮುನ್ನೂರು ರೂಪಾಯಿ ಹೆಚ್ಚು ಕೊಡಬೇಕು ಅಂತ ಅವನು ಕೇಳಬಹುದು. ಅದಕ್ಕಾಗಿಯೇ ಅವನು ಇಲ್ಲೇ ತಂಗಲು ಹೇಳುತ್ತಿರುವುದು. ಸ್ವಲ್ಪ ವಿಶ್ರಾಂತಿ ಪಡೆದುಕೊಂಡು ಹೊರಟರೆ ನಾವು ಇಂದೇ ರಾತ್ರಿ ಒಳಗಾಗಿ ರುದ್ರನಾಥ ತಲಪಿಬಿಡಬಹುದೇನೋ.'' ಕರುಣಾಕರಾನಂದಜಿ ಅವನನ್ನು ಕೇಳಿಯೂಬಿಟ್ಟರು. ''ಬೇಡ ಸ್ವಾಮೀಜಿ, ಈಗಾಗಲೇ ನೀವು ಸಾಕಷ್ಟು ನಡೆದಿದ್ದೀರಿ; ಸುಸ್ತಾಗಿದ್ದೀರಿ. ನನಗೂ ತುಸು ಆಯಾಸವಾಗಿದೆ. ಸಾಮಾನ್ಯವಾಗಿ ಈ ದಾರಿಯಲ್ಲಿ ಬಂದವರು ಇಲ್ಲೇ ತಂಗುತ್ತಾರೆ. ಒಂದೇ ಸಮನೆ ನಡೆದು ಏನಾದರೂ ಹೆಚ್ಚುಕಮ್ಮಿಯಾಗಬಾರದಲ್ಲ? ಇಂದು ಚೆನ್ನಾಗಿ ವಿಶ್ರಾಂತಿ ಮಾಡಿ. ನಾಳೆ ಮುಂಜಾನೆ ಬೇಗನೆ ಹೊರಟು ಬಿಟ್ಟರಾಯಿತು'' ಎಂದನಾತ. ನಮಗೂ ಅದೇ ಸರಿಯೆನಿಸಿತು. ಏನೋ ಉತ್ಸಾಹದಲ್ಲಿ ಮಿತಿ ಮೀರಿ ಮೈ ಕೈ ನೋವು ಮಾಡಿಕೊಂಡರೆ ನಮ್ಮ ಯಾತ್ರೆಯೆಲ್ಲ ಹಾಳಾಗುವುದಷ್ಟೇ ಅಲ್ಲ ; ಆಸ್ಪತ್ರೆ, ವೈದ್ಯರು, ಅಂಗಡಿ ಇತ್ಯಾದಿ ಯಾವ ಅನುಕೂಲತೆಗಳೂ ಇಲ್ಲದ ಸ್ಥಳದಲ್ಲಿ – ಅದೂ ದುರ್ಗಮ ಹಿಮಾಲಯದಲ್ಲಿ ಸಿಕ್ಕಿ ಹಾಕಿಕೊಂಡರೆ ಕಥೆ ಮುಗಿದಂತೆ. ಅಂತು ಅಲ್ಲೇ ತಂಗಿ ವಿಶ್ರಾಂತಿ ಪಡೆಯುವುದು ಎಂದು ತೀರ್ಮಾನಿಸಿದೆವು.

ನಮಗೆ ಅತ್ಯಂತ ಬಾಯಾರಿಕೆಯಾಗಿದ್ದರಿಂದ ಮೊದಲು ಅಲ್ಲಿದ್ದ ಹೋಟೆಲಿಗೆ ಹೋಗಿ ನೀರು ಕುಡಿದೆವು. ಹೋಟೆಲಿ


ಪನ್ನಾರ್ ಗುಫಾ

ನವನು ತುಂಬ ಆದರದಿಂದ ಬರಮಾಡಿಕೊಂಡ. ಅಲ್ಲಿಗೆ ಬರುವ ಯಾತ್ರಿಕರೇ ಕಡಿಮೆ. ಅಲ್ಲಿ ಉಳಿದುಕೊಳ್ಳಲು ಆ ಸಣ್ಣ ಕಟ್ಟಡ, ಊಟಕ್ಕೆ ಆ ಗುಡಿಸಲು-ಹೋಟೆಲು ಬಿಟ್ಟರೆ ಬೇರೆ ದಾರಿಯಿಲ್ಲ. ಆದರೂ ಅಲ್ಲಿನ ಜನ ಆತ್ಮೀಯವಾಗಿ ಕರೆದು ಉಪಚರಿಸುತ್ತಾರೆ; ತುಂಬಾ ಕಾಳಜಿಯಿಂದ ಮಾತನಾಡಿಸುತ್ತಾರೆ. ಗೈಡ್‌ಗೂ ಹೋಟೆಲಿನವರಿಗೂ ತುಂಬ ಆತ್ಮೀಯ ಸಂಬಂಧವಿರುತ್ತದೆ. ಅವರಿಗೆ ಗಿರಾಕಿ ಒದಗಿಸುವವರೂ ಈ ಗೈಡ್‌ಗಳೇ ತಾನೆ? ಅವನಿಗೆ ಅಲ್ಲಿ ಊಟ, ವಸತಿ ಇವೆಲ್ಲ ಉಚಿತ. ನಮ್ಮ ಗೈಡ್ ಹೋಟೆಲಿನವನೊಂದಿಗೆ ಸೇರಿಕೊಂಡ, ಅವರ ಕೆಲಸದಲ್ಲಿ ನೆರವಾದ. ಗಢವಾಲಿ ಜನರ ಒಗ್ಗಟ್ಟು, ಸೌಹಾರ್ದತೆ ತುಂಬ ವಿಶೇಷವಾದದ್ದು.

ಅಷ್ಟರಲ್ಲಿ ಸಣ್ಣಗೆ ಮಳೆ ಹನಿಯಲಾರಂಭಿಸಿತು. ನಾನು ಸುತ್ತ ಮುತ್ತಣ ದೃಶ್ಯಗಳನ್ನು ನೋಡುತ್ತ ಆನಂದಿಸುತ್ತಿದ್ದೆ. ಹತ್ತಿರದಲ್ಲೇ ತುಸು ಎತ್ತರವಾದ ಒಂದೆರಡು ಗುಡ್ಡಗಳಿದ್ದವು. ಅಲ್ಲಿ ಒಬ್ಬಾತ ಹತ್ತಾರು ಎಮ್ಮೆ, ದನಗಳನ್ನು ಹೊಡೆದುಕೊಂಡು ಹೋಗುತ್ತಿದ್ದ. ಬಹುಶಃ ಸಮೀಪದಲ್ಲೆಲ್ಲೋ ಮನೆಗಳಿದ್ದಿರಬೇಕು. ಅಲ್ಲಿಗೆ ದನಗಳನ್ನು ಹುಲ್ಲು ಮೇಯಿಸಲು ಹೊಡೆದುಕೊಂಡು ಬಂದಿರಬೇಕು. ಹಳ್ಳಿಯ ಜನ, ಅದರಲ್ಲೂ ಗುಡ್ಡಗಾಡು ಮಂದಿ. ಇನ್ನೂ ನಾಗರಿಕತೆಯ ಕೃತಕತೆ, ವೈಭವ, ಭೋಗ ವಿಲಾಸಗಳೆಲ್ಲ ಮೈಗೆ ಹತ್ತದ ಕಷ್ಟ ಸಹಿಷ್ಣು ಜನರು. ಹಿಮಾಲಯದ ವಿಚಿತ್ರ ಹವಾಮಾನ, ವಿಪರೀತ ಭೌಗೋಳಿಕ ಸನ್ನಿವೇಶ, ಫಲವತ್ತಾಗಿಲ್ಲದ ಮಣ್ಣು – ಇವುಗಳ ನಡುವೆ ಬದುಕುವುದೇ ಒಂದು ಹೋರಾಟ. ನೋಡುವುದಕ್ಕೆ ಅವರು ಒರಟಾಗಿರುತ್ತಾರೆ, ಅಷ್ಟೇ ಗಟ್ಟಿಮುಟ್ಟಾಗಿರುತ್ತಾರೆ. ಅಲ್ಲಿನ ಪ್ರಕೃತಿಯೂ ಅವರ ಮೇಲೆ ಅಷ್ಟು ನಿರ್ದಾಕ್ಷಿಣ್ಯವಾಗಿರುತ್ತದೆ. ಆದರೆ ಈ ಬಗೆಯ ಜೀವನ ಅವರಿಗೆ ಸಹಜ.

## ೪. ಕುದುರೆ ಲಾಯ ?

ವಿಪರೀತ ಬಳಲಿಕೆ, ಹಸಿವು, ಆಯಾಸಗಳಿಂದ ಕಂಗೆಟ್ಟಿದ್ದ ನಮಗೆ ಏನಾದರೂ ಮಾಡಿ ಮಲಗಿ ನಿದ್ದೆ ಮಾಡಿಬಿಟ್ಟರೆ ಸಾಕಾಗಿತ್ತು. ಕರುಣಾಕರಾನಂದಜಿ ನಿದ್ದೆ ಮಾಡಲು ಜಾಗ ಹುಡುಕತೊಡಗಿದರು. ಎರಡೇ ಕೋಣೆಗಳಿರುವ ಕಟ್ಟಡದಲ್ಲಿ ಒಂದು ಸಾಮಾನುಗಳಿಂದ ತುಂಬಿದ ಕೋಣೆ; ಇನ್ನೊಂದು ಎಲ್ಲರೂ ಸಾಲಾಗಿ ಮಲಗಬಹುದಾದ ವಿಶಾಲ ಕೊಠಡಿ. ಅವರು ನನ್ನನ್ನು ಕರೆದುಕೊಂಡು ಹೋಗಿ ಸಾಮಾನುಗಳ ಕೋಣೆಯನ್ನು ತೋರಿಸಿದರು. ಗೋಡೌನ್‌ನಲ್ಲಿ ನಾನಾ ಗೋಣಿಚೀಲಗಳು, ಮೂಟೆಗಳು, ಪೆಟ್ಟಿಗೆಗಳು. ಆದರೂ ಅಲ್ಲಿ ಒಂದಿಬ್ಬರಿಗೆ ಹಾಸಿಗೆ ರಜಾಯಿಗಳಿದ್ದವು. ಪನ್ನಾರ್ ಬುಗ್ಯಾಲ್‌ನಲ್ಲಿ ಎಲ್ಲೆಡೆ ಬೆಳೆದು ಹಬ್ಬಿದ್ದ ಹುಲ್ಲನ್ನೇ ಕತ್ತರಿಸಿ, ಅದನ್ನು ಚಾಪೆಯ ಅಡಿಗೆ ಹಾಸಿ, ನೆಲಭಾಗ ಮೆತ್ತಗಾಗುವಂತೆ ಮಾಡಿದ್ದರು. ಅದನ್ನು ನೋಡಿದ ಕೂಡಲೇ ನಾನು, ''ಇದೊಳ್ಳೇ ಕುದುರೆ ಲಾಯವನ್ನೇ ಮಲಗಲು ಕೊಟ್ಟಿದ್ದಾರಲ್ಲ'' ಎಂದು ಉದ್ಗರಿಸಿದೆ. ಕುದುರೆ ಲಾಯದಲ್ಲಿ ನಿಜವಾಗಿಯೂ ಆ ಹುಲ್ಲನ್ನೇ ಹಾಕುತ್ತಿದ್ದರು; ಕುದುರೆಗೂ ಅವನ್ನೇ ಕೊಡುತ್ತಿದ್ದರು. ''ಅಲ್ಲಿ ಎಲ್ಲರ ಜೊತೆಗೆ ಮಲಗಿದರೆ ನಮಗೆ ನಿದ್ದೆ ಬರಲಾರದು. ಜೋರಾಗಿ ಗೊರಕೆ ಹೊಡೆಯುತ್ತಾರೆ, ಬೀಡಿ, ಸಿಗರೇಟ್ ದಂ ಎಳೆಯುತ್ತಾರೆ, ಬೇಕಾದ ಬೇಡದ ವಿಷಯವೆಲ್ಲಾ ಮಾತಾಡುತ್ತಾರೆ. ನಾವು ಈ ಗೋಡೌನ್‌ನಲ್ಲೇ ಮಲಗೋಣ'' ಎಂದರು ಕರುಣಾಕರಾನಂದರು. ಗೋಡೌನ್ ಬಾಗಿಲು ತೆಗೆದು ಒಳಗೆ ಹೊಕ್ಕು, ಬ್ಯಾಗ್ ಇತ್ಯಾದಿಗಳನ್ನು ಅಲ್ಲಿ ಇಟ್ಟೇಬಿಟ್ಟರು. ನಾವಿಬ್ಬರೂ ಅಲ್ಲೇ ಹಾಸಿಗೆ ಹರಡಿ ನಮ್ಮ ಹಕ್ಕು ಸ್ಥಾಪನೆ ಮಾಡಿಕೊಂಡುಬಿಟ್ಟೆವು.

ಅಷ್ಟರಲ್ಲಿ ಊಟ ತಯಾರಾಗಿದೆಯೆಂದು ಸುದ್ದಿ ಬಂತು. ಹಸಿದು ಕಂಗೆಟ್ಟಿದ್ದ ನಾವು ಚಪಾತಿ, ಅನ್ನ, ಪಲ್ಯ ಪದಾರ್ಥ ಹಾಕಿಸಿಕೊಂಡು ಹೊಟ್ಟೆ ಭರ್ತಿಯಾಗುವಂತೆ ಊಟ ಮಾಡಿದೆವು. ಆಗಲೇ ಹೊತ್ತು ಇಳಿಯಲು ಆರಂಭವಾಗಿ, ಚಳಿ ತೀವ್ರವಾಗುತ್ತಿತ್ತು. ನಾವು ಗೋಡೌನಿನ ಒಳಗೆ ಹೊಕ್ಕು ಚಿಲಕ ಹಾಕಿಕೊಂಡೆವು: ಚಳಿ ಬರಬರುತ್ತ ಹೆಚ್ಚಾದೀತು, ಆಮೇಲೆ ಹೊರಗಿನಿಂದ ಒಳಗೆ ಬೇರೆ ಯಾರಾದರೂ ಬಂದು ಬಾಗಿಲು ತಟ್ಟಬಾರದು – ಈ ಎರಡೂ ತೊಂದರೆ ಆಗದಂತೆ. ಒಳಗೆ ಒಂದು ಸೀಮೆಯೆಣ್ಣೆ ಬುಡ್ಡಿ ದೀಪವಿತ್ತು; ಅದನ್ನೇ ಹೊತ್ತಿಸಿಕೊಂಡೆವು. ಆಗ ಸ್ವಾಮಿ ಕರುಣಾಕರಾನಂದಜಿ, ''ಎಲ್ಲಾದರೂ ದೀಪ ಬಿದ್ದುಬಿಟ್ಟರೆ ಅನಾಹುತವಾದೀತು. ಸೀಮೆಯೆಣ್ಣೆ ಚೆಲ್ಲಿ ಬೆಂಕಿ ಹೊತ್ತಿಕೊಂಡು ಬಿಟ್ಟರೆ ಗೋಡೌನ್ ತುಂಬಾ ಸಾಮಾನುಗಳಿವೆ, ಎಲ್ಲಾ ಸುಟ್ಟುಹೋದೀತು. ಪಾಪ, ಗುಡ್ಡದ ಮಂದಿ ಎಲ್ಲಿಗೆ ಹೋಗಬೇಕು? ಬೆಂಕಿ ಅಪಘಾತವಾದರೂ ಆದೀತು'' ಎಂದರು. ಬೇಗನೆ ಹಾಸಿಗೆ ಹಾಸಿ, ಮೈಕೊರೆಯುವ ಚಳಿಯನ್ನು ತಡೆದುಕೊಳ್ಳಲು ಚೆನ್ನಾಗಿ ಹೊದ್ದುಕೊಂಡು, ಬೆಂಕಿ ಆರಿಸಿ ಮಲಗಿದೆವು. ಕೆಲವೇ ಕ್ಷಣಗಳಲ್ಲಿ ಭೂಕಂಪವಾದರೂ ಕೇಳಿಸದಂಥ ಗಾಢ ನಿದ್ರೆ ನಮ್ಮನ್ನು ಆವರಿಸಿಬಿಟ್ಟಿತು.

ರಾತ್ರಿ ಏಳು-ಏಳೂವರೆಗೆ ಗೈಡ್ ನಮ್ಮನ್ನೆಬ್ಬಿಸಿ, ''ಊಟ ಮಾಡಿ ಮಲಗಿ ಮಹಾರಾಜ್; ಬೆಳಗ್ಗೆ ಎದ್ದು ಹೊರಡಬೇಕಲ್ಲ?'' ಎಂದ. ನಾವು ನಿದ್ದೆಗಣ್ಣಿನಲ್ಲೇ ಎದ್ದುಬಂದು, ಮುಖ ತೊಳೆದು ಸುತ್ತ ನೋಡಿದಾಗ ಸಣ್ಣಗೆ ಮಳೆ ಜಿನುಗುತ್ತಿತ್ತು. ಆಗಸದಲ್ಲಿ ಕಪ್ಪನೆಯ ಮೋಡಗಳು ಜಮಾಯಿಸಿದ್ದವು. ''ಹವಾಮಾನ ನೋಡಿದರೆ, ಬೆಳಿಗ್ಗೆ ಮಳೆಯಾಗುವ ಲಕ್ಷಣವಿದೆ. ಏನಾದೀತೋ ಹೇಳಲಾಗದು'' ಎಂದ ಗೈಡ್. ಎಲ್ಲಿ ನಮ್ಮ ಯಾತ್ರೆಗೆ ಹಾನಿಯಾದೀತೋ ಎಂಬ ಆತಂಕದಿಂದಲೇ ಊಟ ಮುಗಿಸಿದೆವು. ಉಳಿದ ಯಾತ್ರಿಕರೆಲ್ಲ ದೊಡ್ಡ ಕೋಣೆಯಲ್ಲಿ ಮಲಗಿದ್ದವರು ಒಬ್ಬೊಬ್ಬರಾಗಿ ಊಟಕ್ಕೆ ಬರುತ್ತಿದ್ದರು. ಒಟ್ಟು ಏಳೆಂಟು ಮಂದಿ ಇದ್ದಿರಬಹುದು. ನಮ್ಮ ಊಟವಾದ ಮೇಲೆ ಗೈಡ್‌ಗೆ ಹೇಳಿದೆವು, ''ನಾಳೆ ಬೆಳಿಗ್ಗೆ ಐದಕ್ಕೇ ಹೊರಟುಬಿಡೋಣ.'' ''ಅದೇಕೆ ಸ್ವಾಮಿ? ಚೆನ್ನಾಗಿ ರೆಸ್ಟ್ ಮಾಡಿ, ನಿಧಾನ ನಾಸ್ತಾ ಮಾಡಿ ಹೊರಟರೆ ಸಾಕಲ್ಲ?'' ಎಂದ. ''ಅದೆಲ್ಲ ಬೇಡ; ಬೆಳಿಗ್ಗೆ ಒಂದು ಚಹಾ ಕೊಟ್ಟರೆ ಕೊಡಲಿ. ಐದು ಗಂಟೆಗಂತೂ ಹೊರಡಲೇಬೇಕು. ತಡ ಮಾಡಿದಷ್ಟೂ ಬಿಸಿಲೇರುತ್ತದೆ, ಆಯಾಸ

ಬೇರೆ'' ಎಂದರು ಕರುಣಾಕರಾನಂದರು. 'ಆಗಲಿ' ಎಂದ ವಿಕ್ರಂ ಸಿಂಹ ಬಿಷ್ಟ. ಅವನ ಊಟವಾಗಿರಲಿಲ್ಲ, ಆದ್ದರಿಂದ ಅತ್ತ ನಡೆದ. ನಾವು ಕೋಣೆ ಹೊಕ್ಕು ಮಲಗಿದವರಿಗೆ ಬೆಳಿಗ್ಗೆ ೫.೩೦ರ ವರೆಗೂ ಎಚ್ಚರವಾಗಲಿಲ್ಲ.

## ೫. ಬೆಟ್ಟದ ತುದಿಯ ಹಾದಿ

ಬೆಳಿಗ್ಗೆ ಎದ್ದು ಸಮಯ ನೋಡಿದಾಗ ಐದೂವರೆಯಾಗಿತ್ತು; ಬಾಗಿಲು ತೆರೆದು ಹೊರಗೆ ಬಂದಾಗ ಇನ್ನೂ ಸಣ್ಣಗೆ ಮಳೆಹನಿ ಬೀಳುತ್ತಿತ್ತು. ಆದರೆ ಆಕಾಶದಲ್ಲಿ ಹಿಂದಿನ ರಾತ್ರಿಯಂತೆ ಕಪ್ಪನೆ ಮೋಡಗಟ್ಟಿರಲಿಲ್ಲ. ಹಾಗಾಗಿ ನಾವು ಯಾತ್ರೆ ಮುಂದುವರೆಸಬಹುದೆಂದು ನಮ್ಮ ಗೈಡ್ ಸೂಚನೆ ಕೊಟ್ಟ. ಮುಖ ತೊಳೆದು, ಹೋಟೆಲಿನವನು ಕೊಟ್ಟ ಬಿಸಿಬಿಸಿ ಚಹಾ ಕುಡಿದೆವು. ಹೋಟೆಲಿನವನ ಒಟ್ಟು ಮೊತ್ತವನ್ನು ಕೊಟ್ಟು, ಸುಮಾರು ೫.೫೦ರ ಹೊತ್ತಿಗೆ ರುದ್ರನಾಥದತ್ತ ನಡಿಗೆ ಆರಂಭಿಸಿದೆವು.

ನಿನ್ನೆ ರಾತ್ರಿ ದಟ್ಟೈಸಿದ ಮೋಡಗಳು ವಿರಳವಾಗಿದ್ದರೂ, ಹನಿ ಮಳೆ ಸಣ್ಣಗೆ ಬೀಳುತ್ತಿತ್ತು. ಆದರೆ ದಾರಿ ಕ್ರಮಿಸಿದಂತೆಲ್ಲ ಮಳೆ ನಿಂತುಹೋಯಿತು. ಸುತ್ತಣ ವಾತಾವರಣವೂ ತಿಳಿಯಾಗಿತ್ತು. ಅಲ್ಲಲ್ಲಿ ಇಬ್ಬನಿ ಮುಸುಕಿದ್ದರೂ ಬೆಳಗಾಗುತ್ತ ಬಂದಂತೆ ಸ್ಪಷ್ಟವಾಗಿ ನಿಸರ್ಗದ ದೃಶ್ಯಗಳೆಲ್ಲ ಕಾಣಿಸತೊಡಗಿದವು. ನಾವು ಹೆಜ್ಜೆ ಹಾಕುತಿದ್ದಂತೆ ಗಮನಿಸಿದೆವು: ನಮ್ಮ ದಾರಿ ಸಾಗುತ್ತಿದ್ದುದು ಬೆಟ್ಟದ ತುದಿಯಲ್ಲೇ! ಬೆಟ್ಟದ ತುದಿಯಲ್ಲಿ ಮರಗಿಡಗಳಿಲ್ಲ; ಎಲ್ಲೆಡೆ ಬುಗ್ಯಾಲ್ ಅಥವಾ ಖಾಲಿ ಪ್ರದೇಶ; ಹೆಚ್ಚೆಂದರೆ ಹುಲ್ಲು ಮತ್ತು ಸಣ್ಣಪುಟ್ಟ ಪೊದರುಗಳು. ನಡುನಡುವೆ ಕಣಿವೆಗಳು ಎದುರಾದಾಗ ಮಾತ್ರ ಕೊರಕಲು ಪ್ರದೇಶವು ದಟ್ಟೈಸಿದ ಗಿಡ, ಮರ, ಮುಳ್ಳುಕಂಟಿ, ಪೊದರುಗಳಿಂದ ತುಂಬಿಕೊಂಡಿದ್ದುದು ಗಮನಕ್ಕೆ ಬರುತ್ತಿತ್ತು. ಪರ್ವತದ ತುದಿಯಲ್ಲಿ, ಅದರಲ್ಲೂ ಬೋಳು ಶಿಖರದ ತುದಿಯಲ್ಲಿ ನಡೆದಾಡುವುದೆಂದರೆ ಅದೆಂಥ ಅದ್ಭುತ ಅನುಭವ!

ದೂರದೂರದ ಪರ್ವತ ಸಾಲುಗಳು ಸೂರ್ಯೋದಯದ ಸಮಯದಲ್ಲಿ ಚಿತ್ರವಿಚಿತ್ರ ಬಣ್ಣಗಳನ್ನು ಹೊತ್ತು ನಿಂತಿದ್ದವು. ಹಿಮಾಚ್ಛಾದಿತ ಪರ್ವತ ಶಿಖರಗಳಂತೂ ಬಿಸಿಲಿನಲ್ಲಿ ಹೊಂಬಣ್ಣದಿಂದ ಮಿರುಗುತ್ತವೆ; ಹೊತ್ತುಹೊತ್ತಿಗೂ ಅದರ ಬಣ್ಣ ಬದಲಾಗುತ್ತದೆ. ಪರ್ವತ ಶಿಖರಗಳ ನಡುವಿನಿಂದ ಸೂರ್ಯಕಿರಣಗಳು ತೂರಿ ಬರುವಾಗ ಅವು ನಿರ್ಮಿಸುವ ವರ್ಣವಿನ್ಯಾಸ ಎಂಥವರ ಮನಸ್ಸನ್ನಾದರೂ ಒಂದು ಕ್ಷಣ ಸೆರೆಹಿಡಿದುಬಿಡುತ್ತವೆ.

ಅಚ್ಚರಿಯ ವಿಷಯವೆಂದರೆ, ಇನ್ನೇನು ಪರ್ವತದ ತುದಿಯಿಂದಿಳಿದು ಕಣಿವೆಯತ್ತ ನಡೆಯಬೇಕಾಗುವುದು ಎಂದು ನಿರೀಕ್ಷಿಸಿದರೆ, ಹಾಗಾಗಲಿಲ್ಲ! ರುದ್ರನಾಥದವರೆಗೂ ಆ ದಾರಿ ಹಾಗೆಯೇ ಇತ್ತು. ಪರ್ವತದ ಇಕ್ಕೆಲಗಳ ಕಣಿವೆಗಳನ್ನೂ ನೋಡುತ್ತ ಸವಿಯುತ್ತ ಹೆಜ್ಜೆ ಹಾಕುವ ಸುಯೋಗ ನಮ್ಮದಾಯಿತು.

ಸಾಕಷ್ಟು ದೂರ ನಡೆದ ಮೇಲೆ ತುಸು ಎತ್ತರದ ಪರ್ವತ ಆರಂಭವಾಯಿತು. ನಿನ್ನೆ ಕಡಿದಾದ ಪರ್ವತವೇರಿ ಬಂದದ್ದರಿಂದ ಉಂಟಾಗಿದ್ದ ಆಯಾಸ ಇನ್ನೂ ಮುಗಿದಿರಲಿಲ್ಲ. ಏರುದಾರಿಯಲ್ಲಿ ಬಹು ಕಷ್ಟದಿಂದ ನಡೆಯುತ್ತಿದ್ದೆವು. ನಾವು ಮುಂದೆ ಕ್ರಮಿಸಬೇಕಾಗಿದ್ದ ಪರ್ವತದ ತುದಿಯನ್ನು ತೋರಿಸಿದ ನಮ್ಮ ಗೈಡ್, ''ಆ ಪರ್ವತವೇರಿಬಿಟ್ಟರೆ ಮುಗಿಯಿತು. ಆಮೇಲೆ ಇಳಿಜಾರೇ'' ಎಂದ. ಅದನ್ನು ನೋಡಿಯೇ ನಮ್ಮೆದೆ ಬಿರಿಯಿತು. ಅದರ ತುದಿಯನ್ನು ತಲುಪಲು ಕನಿಷ್ಠ ಒಂದು–ಒಂದೂವರೆ ಗಂಟೆಯಾದರೂ ಬೇಕಾಗಿತ್ತು. ಆದರೆ ಇನ್ನೂ ಎಳೆಬಿಸಿಲು ಮೇಲಕ್ಕೆ ಬಂದಿಲ್ಲ; ಬೆಳಗಿನ ಚಳಿಯ ವಾತಾವರಣ ಹಿತಕರವಾಗಿತ್ತು. ಆದ್ದರಿಂದ ನಮ್ಮ ನಡಿಗೆ ಸಾಕಷ್ಟು ವೇಗವಾಗಿ ಮುಂದುವರಿಯಿತು; ಬೇಗನೆ ಆ ಕೊನೆಯ ಪರ್ವತವನ್ನೂ ಏರಿ ಸಾಗಬಹುದು ಅನ್ನಿಸಿತು.

ಆ ಪರ್ವತದ ತುದಿ ಸಮೀಪಿಸುತ್ತಿದ್ದಂತೆ ವಿಕ್ರಂ ಸಿಂಹ ಬಿಷ್ಟ ಹೇಳಿದ: ''ಇದೇ ಇಲ್ಲೆಲ್ಲ ಅತ್ಯಂತ ಎತ್ತರವಾದ ಪ್ರದೇಶ. ಸುಮಾರು ೪೦೦೦ ಮೀಟರ್ ಎತ್ತರವಿರಬಹುದು ಅನ್ನುತ್ತಾರೆ. ಅದೋ ಅಲ್ಲಿ ನೋಡಿ, ಒಂದು ದ್ವಾರ ಕಾಣಿಸುತ್ತಿದೆಯಲ್ಲ'' ಎಂದ. ನಾವು ಅತ್ತ ನೋಡಿದೆವು. ಅಲ್ಲಿ ಒಂದೆಡೆ ಕೆಲವು ಕಲ್ಲು ಬಂಡೆಗಳು ಒಂದೆಡೆ ರಾಶಿಯಾಗಿ ಬಿದ್ದಿದ್ದವು. ಅವುಗಳ ನಡುವಿನಿಂದ ನಮ್ಮ ದಾರಿ ಸಾಗುತಿತ್ತು. ಬಂಡೆಗಳ ನಡುವೆ ಒಂದು ದ್ವಾರದಂಥ ರಚನೆಯಿತ್ತು; ಅದರ ಮೇಲ್ಭಾಗದಲ್ಲಿ ಕೆಲವು ಗಂಟೆಗಳು ತೂಗಾಡುತ್ತಿದ್ದವು.

''ಆ ಗಂಟೆಯನ್ನು ಬಾರಿಸಿಯೇ ಮುಂದಕ್ಕೆ ಸಾಗಬೇಕು. ಇಲ್ಲಿಂದ ಮುಂದಕ್ಕೆ ಪಿತೃಲೋಕವಂತೆ. ಗಂಟೆ ಬಾರಿಸಿದಾಗ ಪಿತೃದೇವತೆಗಳು ದಾರಿ ಬಿಟ್ಟುಕೊಡುತ್ತಾರೆ ಎನ್ನುತ್ತಾರೆ. ಇಲ್ಲದಿದ್ದರೆ ಮರಳಿ ಬರುತ್ತಾರೆ ಎಂಬ ಖಾತ್ರಿ ಇಲ್ಲ'' ಎಂದ ನಮ್ಮ ಗೈಡ್. ಪಿತೃಲೋಕ ಎಂದ ಕೂಡಲೇ ನಮಗೆ ಭಯವಾಯಿತು. ನಮ್ಮ ಅಜ್ಜ, ಮುತ್ತಾತರೆಲ್ಲಾ ಸೇರಿಕೊಂಡಿರುವ ಲೋಕವೇ ಇದು? ಭಯದಿಂದಲೇ ಗಂಟೆ ಬಾರಿಸಿದೆವು; ಮೂರು ಮೂರು ಬಾರಿ ಜೋರಾಗಿ ಬಾರಿಸಿದೆವು. ಮುಂದಕ್ಕೆ ವೈತರಣೀ ನದಿ, ಸರಸ್ವತೀ


ರುದ್ರನಾಥದತ್ತ..

ಕುಂಡ ಇವೆಲ್ಲ ಇವೆ. ಆದರೆ ರುದ್ರನಾಥ ದಾಟಿದ ಮೇಲಷ್ಟೇ ಅವು ಬರುತ್ತವೆ ಎಂದ ಗೈಡ್. ಒಂದು ರೀತಿಯಲ್ಲಿ ರುದ್ರಭಯಾನಕ ಸ್ಥಳವೆಂದು ನಮಗೆ ಭಾಸವಾಗತೊಡಗಿತು. ನಿಜಕ್ಕೂ ಬಯಲಿನಂಥ, ಗಿಡಮರಗಳಿಲ್ಲದ ಆ ಖಾಲಿಪ್ರದೇಶ ಸ್ಮಶಾನದಂಥ ಭಾವನೆಯನ್ನು ಮೂಡಿಸುತ್ತದೆ. ಪೌರಾಣಿಕ ಕಥೆ ಹಾಗೂ ನಂಬಿಕೆಗಳು ಅದರೊಂದಿಗೆ ಸೇರಿಕೊಂಡರೆ ಆ ಭಾವನೆ ಮುಪ್ಪುರಿಗೊಳ್ಳುವುದು.

ಅಲ್ಲಿಂದ ಮುಂದಕ್ಕೆ ತಗ್ಗಿನ ದಾರಿ ಆರಂಭವಾಯಿತು. ಬಹು ದೂರ ಅದೇ ಖಾಲಿ ಬುಗ್ಯಾಲ್; ತುಂಬ ದೂರದ ತನಕ ವಿಸ್ತಾರವಾಗಿ ಹರಡಿದ್ದ ದಾರಿ ಕಾಣಿಸಿತು. ದೂರದಲ್ಲಿ ಒಂದೆಡೆ ಒಂದೆರಡು ಗುಡಿಸಲುಗಳು ಕಾಣಿಸಿಕೊಂಡಾಗ ವಿಕ್ರಂ ಸಿಂಹ, ''ಅಲ್ಲಿ ಚಹಾ ಕುಡಿಯಬಹುದು'' ಎಂದ. ಅಷ್ಟರಲ್ಲಿ ಸಣ್ಣಗೆ ಜಿನುಗುಮಳೆ ಆರಂಭವಾಗಿದ್ದು, ಸುತ್ತಮುತ್ತ ತುಸು ಮಂಜು ಮುಸುಕತೊಡಗಿತು; ಆದರೂ ಪರ್ವತದ ದೃಶ್ಯಗಳೆಲ್ಲ ಸ್ಪಷ್ಟವಾಗಿ ಕಾಣಿಸುತ್ತಿದ್ದವು. ನಮ್ಮ ಮಾರ್ಗದರ್ಶಕ ನಾನಾ ಕಥೆಗಳನ್ನೆಲ್ಲ ಹೇಳತೊಡಗಿದ್ದ. ರುದ್ರನಾಥದಲ್ಲೊಬ್ಬರು ಸಾಧುಗಳಿದ್ದರಂತೆ. ವರ್ಷದ ಹನ್ನೆರಡೂ ತಿಂಗಳು ಒಂದು ಗುಹೆಯಲ್ಲಿ ಬೆಂಕಿ ಉರಿಸಿ ಬೆಚ್ಚಗೆ ಮಾಡಿಕೊಂಡು ಇರುತ್ತಿದ್ದರಂತೆ. ಅವರಲ್ಲಿ ಅಷ್ಟೊಂದು ಶಕ್ತಿಯಿದ್ದದ್ದರಿಂದಲೇ ಅವರಿಗೆ ಹಾಗೆ ಇರಲು ಸಾಧ್ಯವಾಯಿತು ಎಂದ ಗೈಡ್. ಅವನ ಪ್ರಕಾರ, ಆರು ತಿಂಗಳು ರುದ್ರನಾಥದ ಬೆಟ್ಟವನ್ನೆಲ್ಲ ಹಿಮ ಆವರಿಸಿಬಿಡುತ್ತದೆ; ಆಗ ಅಲ್ಲಿ ಯಾರೂ ವಾಸ ಮಾಡುವಂತಿಲ್ಲ. ಯಾತ್ರಿಕರಂತೂ ಇರುವುದೇ ಇಲ್ಲ. ಆ ಚಳಿ ತಡೆದುಕೊಂಡು, ಆಹಾರಕ್ಕೆ ವ್ಯವಸ್ಥೆ ಮಾಡಿಕೊಂಡು ಒಬ್ಬಂಟಿ ಇರುವುದು ಸಾಮಾನ್ಯರಿಗೆ ಸಾಧ್ಯವೆ? ಅಲ್ಲದೆ ಪಿತೃಗಳು, ರುದ್ರನ ಗಣಗಳು, ಪ್ರೇತಾತ್ಮಗಳು ಓಡಾಡುವ ಸ್ಥಳವಲ್ಲವೆ ಅದು?

ಇನ್ನೊಂದು ವಿಚಾರ ಅವನು ತಿಳಿಸಿದ್ದೆಂದರೆ, ಅಲ್ಲಿ ಸಿಗುವ ಗಿಡಮೂಲಿಕೆಗಳ ಬಗ್ಗೆ. ನಾನಾ ಕಾಯಿಲೆಗಳಿಗೆ ಔಷಧಿ ತಯಾರಿಸುವ ಗಿಡಗಳು ರುದ್ರನಾಥದ ತಪ್ಪಲಿನಲ್ಲಿ ಸಿಗುತ್ತವಂತೆ. ಆದರೆ ಅವುಗಳ ಬಗ್ಗೆ ಮಾಹಿತಿ ಕೆಲವರಿಗೆ ಮಾತ್ರ ಗೊತ್ತಿದೆ; ನಮಗಿಂತ ಹೆಚ್ಚಾಗಿ ಚೀನೀಯರಿಗೆ ಗೊತ್ತಿದೆಯಂತೆ. ಅವುಗಳನ್ನು ರಹಸ್ಯವಾಗಿ ಚೀನಾಕ್ಕೆ ಸಾಗಿಸುವ ಭೂಗತ ವ್ಯಕ್ತಿಗಳ ಒಂದು ದಂಧೆಯೇ ಇದೆಯಂತೆ. ಒಂದು ಗಿಡದ ಐದಿಂಚು ಉದ್ದದ ಕಡ್ಡಿಯೊಂದಕ್ಕೆ ಇಪ್ಪತ್ತು ಸಾವಿರ ರೂಪಾಯಿಯಷ್ಟು ಬೆಲೆಯಿದೆ ಎಂದ.

ಅಲ್ಲಿ ಕಾಣಿಸಿಕೊಂಡ ಗುಡಿಸಿಲಿಗೆ ಹೋಗಿ ತುಸು ಚಹಾ ಕುಡಿದು ಮುಂದುವರಿದೆವು. ಬೆಳಗಿನ ತಿಂಡಿ ಅಲ್ಲಿ ಮಾಡಲಿಲ್ಲ. ಅವನು ಇನ್ನು ಹೊಸದಾಗಿ ಅಡಿಗೆ ಮಾಡಿ ಮುಗಿಸುವ ಹೊತ್ತಿಗೆ ತಡವಾಗಬಹುದು; ಅಷ್ಟರಲ್ಲಿ ರುದ್ರನಾಥ ತಲುಪಿಬಿಡಬಹುದು ಎಂದ ಗೈಡ್. ಇನ್ನು ಒಂದರ್ಧ ಗಂಟೆ ದಾರಿಯಷ್ಟೇ ಇರುವುದು ಎಂದ. ಇನ್ನೂ ಮುಂದುವರಿದಾಗ ದೂರದಲ್ಲಿ ಒಂದು ಬೆಟ್ಟ, ಅದರ ಸೆರಗಲ್ಲೇ ಒಂದೆರಡು ಗುಹೆಯಂಥ ಸ್ಥಳಗಳು ಕಾಣಿಸಿದವು, 'ಅದೇ ರುದ್ರನಾಥ' ಎಂದ ನಮ್ಮ ಮಾರ್ಗದರ್ಶಕ.

## ೬. ಗುಹೆಯೊಳಗಿನ ಗುಡಿ – ರುದ್ರನಾಥ

ಬೆಳಿಗ್ಗೆ ಸುಮಾರು ೮.೪೫ರ ಹೊತ್ತಿಗೆ ರುದ್ರನಾಥ ತಲುಪಿದೆವು. ಬೆಟ್ಟದ ಸೆರಗಿನಲ್ಲಿ ಒಂದು ದೊಡ್ಡ ಬಂಡೆ ಕಾಣಿಸುತ್ತಿತ್ತು. ಆ ಬಂಡೆಯ ತಳದಲ್ಲಿ ಒಂದು ಗುಹೆ; ಅದರೊಳಗೇ ರುದ್ರನಾಥನ ದೇಗುಲ. ''ಅದೇ ರುದ್ರನಾಥ. ಅಲ್ಲಿಗೆ ಆಮೇಲೆ ಹೋಗೋಣ. ಇಲ್ಲಿ ಕಾಣಿಸುತ್ತಿದೆಯಲ್ಲ , ಇದು ಒಂದು ಹೋಟೆಲ್; ಇದು ಹಾಗೂ ಇನ್ನೊಂದು ಆ ಕಡೆ; ಎರಡೇ ಹೋಟೆಲ್ ಇಲ್ಲಿರುವುದು. ನಾವು ಇಲ್ಲೇ ತಂಗೋಣ'' ಎಂದ ಗೈಡ್. ''ಸ್ನಾನ ಮುಗಿಸಿ, ದೇವರ ದರ್ಶನ ಮಾಡೋಣ'' ಎಂದನಾತ. ನಾವು ಹೌಹಾರಿದೆವು. ಬೆಳಗಿನ ಚಳಿಯೊಂದಿಗೆ ತುಂತುರು ಮಳೆಯೂ ಸೇರಿಕೊಂಡು, ನೀರಿಗೆ ಕೈಯಿಟ್ಟರೆ ಕೈ ಮರಗಟ್ಟಿದಂತಾಗುತ್ತದೆ; ಇಲ್ಲಿ ಸ್ನಾನ ಮಾಡುವುದು ಹೇಗೆ? 'ಬಿಸಿನೀರು ಸಿಗುವುದೋ ಏನೊ?' ಎಂದು ಕೇಳಿದ್ದಕ್ಕೆ, ''ಹೇಳಿದರೆ ಮಾಡಿಕೊಡುತ್ತಾರೆ. ಬಕೆಟ್ಟಿಗೆ ಮೂವತ್ತು ರೂಪಾಯಿ ಚಾರ್ಜು ಮಾಡುತ್ತಾರೆ'' ಎಂದ ಗೈಡ್.

ನಾವು ಹೇಳಿದ ಕೂಡಲೇ ಗೈಡ್ ಆ ಹೋಟೆಲಿನ ಮಾಲೀಕನಿಗೆ, ''ಪಂಡಿತ್‌ಜೀ, ಟೂರಿಸ್ಟ್ ಬಂದಿದ್ದಾರೆ'' ಎಂದ. ಪಂಡಿತ್‌ಜೀ ನಮ್ಮನ್ನು ಸ್ವಾಗತಿಸಿದ. ಉತ್ತರ ಭಾರತದಲ್ಲಿ ಬ್ರಾಹ್ಮಣರನ್ನು, ಅರ್ಚಕರನ್ನು ಪಂಡಿತ್‌ಜೀ ಎಂದು ಸಂಬೋಧಿಸುತ್ತಾರೆ. ನಮಗೆ ಬಿಸಿನೀರು ಕಾಯಿಸಲು ಹೇಳಿದ ನಂತರ ಗೈಡ್, ''ನೀವು ಸುಸ್ತಾಗಿದ್ದೀರ. ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳಿ. ಅಷ್ಟರಲ್ಲಿ ಪಂಡಿತ್‌ಜೀ ನೀರು ಕಾಯಿಸುತ್ತಾರೆ'' ಎಂದ ನಮಗೆ. ಅನಂತರ ಒಂದು ಕೋಣೆಯನ್ನು ತೋರಿಸಿ, ''ಅಲ್ಲಿ ಬೇಕಾದಷ್ಟು ಹಾಸಿಗೆ, ಚಾದರಗಳೆಲ್ಲ ಇವೆ. ಬೇಕಾದಷ್ಟನ್ನು ಹಾಸಿಕೊಳ್ಳಿ'' ಎಂದು ಪಂಡಿತ್‌ಜೀ ಜೊತೆಗೆ ಅವರ ಗಢವಾಲೀ ಭಾಷೆಯಲ್ಲಿ ಮಾತನಾಡುತ್ತ ಅಡಿಗೆ ಮನೆಯತ್ತ ಹೋದ. ಆ ಕೋಣೆಯನ್ನು ನೋಡಿದರೆ, ಕತ್ತಲೆ–ಧೂಳು ಇತ್ಯಾದಿಗಳಿಂದ ಕವಿದಿದ್ದು, ಅಲ್ಲಿ ವಿಶ್ರಾಂತಿ ಪಡೆದರೆ ನಿದ್ದೆ ಬಂದೀತೇ ಎಂದು ಸಂದೇಹವುಂಟಾಯಿತು. ಆದರೆ ನಮಗೆ ಬೇರೆ ದಾರಿ ಇರಲಿಲ್ಲ. ನಮಗೆ ಆದ ಆಯಾಸದಲ್ಲಿ ಅವೆಲ್ಲ ಮರೆತು ಹೋಗಿ, ತುಸು ಹೊತ್ತು ನಿದ್ರಿಸಿದೆವು.

ಬಿಸಿನೀರು ಕಾದಿದೆಯೆಂದು ಪಂಡಿತ್‌ಜೀ ಬಂದು ಕೂಗಿದಾಗ ಭಾರವಾದ ನಿದ್ದೆಯ ಕಣ್ಣುಗಳನ್ನು ಬಿಡುತ್ತಾ ಎದ್ದು ಕುಳಿತೆವು.


ರುದ್ರನಾಥ ದೇವಾಲಯ